1	2	3	4
3	ಶಿರಗುಪ್ಪಿ ಕೆಂದೂರು ರಸ್ತೆ ಗೊಂಡಿಕೊಪ್ಪ ಮೂಲಕ	ಹಳ್ಳಿ ರಸ್ತೆ	4.00ಕಿ.ಮೀ.
4	ಪಿ. ಬಿ. ರಸ್ತೆಯಿಂದ ಆದಿ ಜೈನವಾಡಿ ಸಿದ್ನಾಳ್ ಹುನ್ನರ್ಗಿ ರಸ್ತೆ.	,,	6.00ಕಿ.ಮೀ.
5	ಪಿ. ಬಿ. ರಸ್ತೆಯಿಂದ ಆದಿ ಜೈನವಾಡಿ ಸಿದ್ನಾಳ್ ಹರ್ಣರ್ಗಿ ರಸ್ತೆ ಸಿ. ಡಿ. ಕಾಮಗಾರಿಗಳು	,,	4. ಸಿ. ಡಿ.
6	ರಾಂಪುರ ಅಪ್ರೋಚ್ ರಸ್ತೆ	,,	4.00ಕಿ.ಮೀ.
7	ಪಂಗೇರಿ (ಎ) ಅಪ್ರೋಚ್ ರಸ್ತೆ	,,	3.00ಕಿ.ಮೀ.
8	ಪಂಗೇರಿ (ಎ) ಅಪ್ರೋಚ್ ರಸ್ತೆ ಸಿ.ಡಿ. ಕಾಮಗಾರಿಗಳು	,,	2. ಸಿ. ಡಿ.
9	ಲಕಾನ್‌ಪುರ ಪಡಲಿಹಾಳ ರಸ್ತೆ	,,	3.00ಕಿ.ಮೀ.
			26.00ಕಿ.ಮೀ. 8 ಸಿ.ಡಿ.

ವಿಷಯ :– ಕರ್ನಾಟಕದಲ್ಲಿನ ಕರಾವಳಿ ಪ್ರದೇಶ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 531 (829)

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.?

ಅ) ಕರ್ನಾಟಕದಲ್ಲಿನ ಕರಾವಳಿ ಪ್ರದೇಶ ಕೊರೆತ ತಡೆಗಟ್ಟಲು, ಕೇಂದ್ರ ಸರ್ಕಾರವು ನಿರ್ದಿಷ್ಟವಾದ ಹಾಗೂ ವಿವರವಾದ ವರದಿ ಸಲ್ಲಿಸಲು ರಾಜ್ಯ ಸರ್ಕಾರವನ್ನು ಕೇಳಿರುವುದೆ ?

ಆ) ಹಾಗಿದ್ದಲ್ಲಿ ಅದನ್ನು ತಯಾರು ಮಾಡಿ ಕಳುಹಿಸಲಾಗಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ, ಯಾವಾಗ ಕಳುಹಿಸಲಾಗುವುದು ?

ಉ) ಉದ್ದೇಶಿಸಿದ ಯೋಜನೆ ಮೇಲೆ ವ್ಯಯ ಮಾಡಬೇಕಾದ ಒಟ್ಟಾರೆ ಮೊಬಲಗು ಎಷ್ಟು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) 1982 ನೇ ಸಾಲಿನಲ್ಲಿ ಮೊದಲ ಬಾರಿಗೆ ಕರ್ನಾಟಕ ರಾಜ್ಯವು ಸಲ್ಲಿಸಿದ್ದ "ಕರ್ನಾಟಕ ಕರಾವಳಿ ಕೊರೆತ ತಡೆಗಟ್ಟುವ ಸಮಗ್ರ ಯೋಜನೆ" ಬಗ್ಗೆ ಕೇಂದ್ರ ಜಲ ಆಯೋಗವು ಅಂಶಗಳನ್ನು ಗಮನಿಸಿ ಪರಿಷ್ಕರಿಸಲು ಸಲಹೆ ಮಾಡಿದೆ.

ಆ) 1985 ನೇ ಸಾಲಿನಲ್ಲಿ 150 ಕೋಟಿ ರೂ.ಗಳ ಸಮಗ್ರ ಯೋಜನೆ ಹಾಗೂ 1989ನೇ ಆಗಸ್ಟ್ ಮಾಹೆಯಲ್ಲಿ ಪರಿಷ್ಕರಿಸಿದ 145 ಕೋಟಿ ರೂ.ಗಳ ಸಮಗ್ರ ಯೋಜನೆಯನ್ನು ಕೇಂದ್ರ ಜಲ ಆಯೋಗಕ್ಕೆ ಬಿಡುಗಡೆ ಕೋರಿ ಕಳುಹಿಸಲಾಗಿದೆ.

ಇ) "ಆ" ಪ್ರಶ್ನೆಯ ಉತ್ತರದಿಂದ ಉದ್ಭವಿಸುವುದಿಲ್ಲ.

ಉ) 145 ಕೋಟಿ ರೂ. ಗಳು.

Sub :— ABOLITION OF POST OF EXECUTIVE DIRECTOR AT MYSORE PAPER MILLS LTD.

Un starred L. A. Qn. No. 532 (684)

Sri C. Byregowda (Vemagal) :– Will be Chief Minister be Please to state ?

1) When the post of Executive Director in Mysore Paper Mills was abolished and the reason for the same ?

2) Whether it is a fact that the post of Executive Director in MPM was again created during the year 1989; if so, the reason for the same ?

Sri S. Bangarappa (Chief Minister) :-

1) The post of Executive Director was temporarily abolished with effect from 4-5-1987. The reasons for the abolition were :-

i) The newsprint project was completed and newsprint production had stabilised.

ii) It was then felt that there was no immediate need to have Executive Director in addition to a General Manager (Production) at Bhadravati.

2) Yes. The post of Executive Director in a lower grade than the grade at the time of abolition of the post has been created with effect from 22-5-1989.

The reasons for reviving the post of Executive Drector were :

i) The incumbent to the post of General Manager (Prostet) prior to 22-5-1989 had reached the maxmimum of the scale and was stagnating at the maximum of General Manager's scale of pay from Sept. 1986 and possessed sufficiant experience. As such the Board has examined the issue & thought it fit to create the post of Executive Director having pay scales lower than the pay scale of the time of abolition of post and above the pay scale of General Manager.

ವಿಷಯ :- ಎಂ. ಪಿ. ಎಂ. ನ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 533 (686)

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.?

ಅ) ಎಂ. ಪಿ. ಎಂ. ನ ಕಾರ್ಮಿಕ ಸಂಘದ ಪದಾಧಿಕಾರಿಗಳ (ಹಿಂದಿನ) ವಿರುದ್ಧ ಏನಾದರೂ ದೂರುಗಳಿದ್ದುವೇ, ಅಥವಾ ಕಾರ್ಖಾನೆಯ ಒಳಾವರಣದಲ್ಲಿ 5-4-1990 ರಂದು ಹಿಂಸಾಚಾರ ನಡೆದಿತ್ತೇ?

ಆ) ಹಾಗಿದ್ದಲ್ಲಿ ಮೇಲ್ಕಂಡ ದೂರಿನ ವಿರುದ್ಧ ಆಡಳಿತ ವರ್ಗವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) ಹೌದು.

ಆ) ಸಂಬಂಧಪಟ್ಟ ಉದ್ಯೋಗಿಗಳಿಗೆ ಷೋಕಾಸ್ ನೋಟೀಸ್‌ಗಳನ್ನು ನೀಡಲಾಗಿದ್ದು, ಅವರಲ್ಲಿ ಬಹುತೇಕ ಉದ್ಯೋಗಿಗಳಿಂದ ಉತ್ತರ ಸಹ ಬಂದಿವೆ. ಈ ಉತ್ತರಗಳನ್ನು ಪರಿಶೀಲಿಸಲಾಗುವುದು. ಮತ್ತು ನಿಯಮಾನುಸಾರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ :- ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಪ್ರಮುಖ ಪತ್ರಿಕೆಗಳ ದರಗಳ ಪೆಚ್ಚಳ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 534 (969)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.?

ಅ) ಡಿ. ಎ. ವಿ. ಪಿ. ಪ್ರಮುಖ ಪತ್ರಿಕೆಗಳ ಜಾಹೀರಾತಿನ ದರಗಳನ್ನು ಕಾಲಂ ಸೆಂ. ಮೀ. ಗೆ ರೂ. 9.80 ರಿಂದ 14.60 ಕ್ಕೆ ಪೂರ್ವಾನ್ವಯವಾಗಿ ಏರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆ ಪ್ರಮುಖ ಪತ್ರಿಕೆಗಳ ದರಗಳನ್ನು ಯಾವಾಗ ಪೆಚ್ಚಿಸಲಿವೆ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.